## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 04 |
| 2) | ಸದಸ್ಯರ ಹೆಸರು | : | ಶ್ರೀ. ಮಧು ಜಿ ಮಾದೇಗೌಡ |
| 3) | ಉತ್ತರಿಸಬೇಕಾದ ದಿನಾಂಕ: | : | 13.02.2024 |
| 4) | ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತವು (ಕೆ-ರೈಡ್) ರಾಜ್ಯದಲ್ಲಿ ಗುರುತಿಸಿ, ಅನುಷ್ಠಾನಿಸಲು ಒಪ್ಪಂದ ಮಾಡಿಕೊಂಡಿರುವ ಹೊಸ ರೈಲ್ವೆ ಮಾರ್ಗಗಳ ನಿರ್ಮಾಣ ಯೋಜನೆಗಳು ಯಾವುವು; (ಯೋಜನೆಗಳ ಅನುಷ್ಠಾನದ ಅಂದಾಜು ಮೊತ್ತ ಸೇರಿದಂತೆ ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತದ (ಕೆ-ರೈಡ್) ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

| ಕ್ರ. ಸಂ | ಯೋಜನೆ ವಿವರ | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| 1. | ಬೆಂಗಳೂರು ಉಪನಗರ ರೈಲು ಯೋಜನೆ – 148.17 ಕಿ.ಮೀ | 15767.00 |
| 2. | ಬೈಯ್ಯಪ್ಪನಹಳ್ಳಿ-ಹೊಸೂರು ದ್ವಿಪಥೀಕರಣ ಯೋಜನೆ – 48 ಕಿ.ಮೀ | 498.73 |
| 3. | ಯಶವಂತಪುರ-ಚನ್ನಸಂದ್ರ ದ್ವಿಪಥೀಕರಣ ಯೋಜನೆ –21.7 ಕಿ.ಮೀ | 314.10 |

ಈ ಯೋಜನೆಗಳ ಸಂಪೂರ್ಣ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಆ) | ರಾಜ್ಯದಲ್ಲಿ ವಿದ್ಯುದ್ದೀಕರಣ ಬಾಕಿ ಇರುವ ರೈಲ್ವೆ ಮಾರ್ಗಗಳು ಯಾವುವು; ಬಾಕಿ ಇದ್ದಲ್ಲಿ, ಯಾವ ಅವಧಿಯೊಳಗೆ ರೈಲ್ವೆ ಮಾರ್ಗಗಳ ವಿದ್ಯುದ್ದೀಕರಣವನ್ನು ಪೂರ್ಣಗೊಳಿಸಲಾಗುವುದು; (ವಿವರ ನೀಡುವುದು) | ರಾಜ್ಯದಲ್ಲಿ ಈ ಕೆಳಕಂಡ ನೂತನ ರೈಲ್ವೆ ಮಾರ್ಗ ಯೋಜನೆಗಳ ವಿದ್ಯುದ್ದೀಕರಣ ಬಾಕಿ ಇದ್ದು, ಈ ಕೆಳಕಂಡ ಕಾಲಮಿತಿಯಲ್ಲಿ ಈ ಮಾರ್ಗಗಳ ವಿದ್ಯುಧೀಕರಣ ಪೂರ್ಣಗೊಳಿಸುವುದಾಗಿ ನೈರುತ್ಯ ರೈಲ್ವೆ ಇಲಾಖೆಯು ಮಾಹಿತಿ ನೀಡಿರುತ್ತದೆ. |

| ಕ್ರ ಸಂ | ಮಾರ್ಗ | ಕಾಲಮಿತಿ |
|---|---|---|
| 1. | ಸೂಳದಾಳ- ಘಟಪ್ರಭ | ಫೆಬ್ರವರಿ-2024 |
| 2. | ಹೊಳೇನರಸೀಪುರ- ಹಾಸನ | ಫೆಬ್ರವರಿ-2024 |
| 3. | ಸುಬ್ರಮಣ್ಯ ರಸ್ತೆ- ಕಬಕಪುತ್ತೂರು | ಫೆಬ್ರವರಿ-2024 |
| 4. | ಬಾಗಲಕೋಟೆ- ವಂದ್ಯಾಲ | ಮಾರ್ಚ್ - 2024 |
| 5. | ಕುಡಚಿ- ವಿಜಯನಗರ | ಮಾರ್ಚ್-2024 |
| 6. | ಸುಬ್ರಮಣ್ಯ ರಸ್ತೆ- ಸಕಲೇಶಪುರ | ಜೂನ್ - 2024 |
| 7. | ಅಮರಾವತಿ ಕಾಲೋನಿ- ವ್ಯಾಸ ಕಾಲೋನಿ | 2025-26 |
| 8. | ಬಾಗಲಕೋಟೆ- ಖಜ್ಜಿದೋಣಿ | 2026-27 |
| 9. | ಗಿಣಿಗೇರಾ- ಕರಟಗಿ | 2026-27 |
| 10. | ತಳಕಲ್- ಹನಮಾಪುರ | 2026-27 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ರೈಲುಗಳಿಗೆ ಆಕಸ್ಮಿಕವಾಗಿ ಸಿಲುಕಿ ಜೀವಕಳೆದುಕೊಂಡವರ ಸಂಖ್ಯೆ ಎಷ್ಟು; (ವರ್ಷ ಪುರಷರು ಮತ್ತು ಮಹಿಳೆಯರ ಸಂಖ್ಯೆ ಬಗ್ಗೆ ಮಾಹಿತಿ ನೀಡುವುದು ಆಕಸ್ಮಿಕವಾಗಿ ರೈಲಿಗೆ ಸಿಲುಕಿ ಪ್ರಾಣ ಕಳೆದುಕೊಂಡಲ್ಲಿ ಪರಿಹಾರ ಮೊತ್ತ ನೀಡಲು ಅವಕಾಶ ಇದೆಯೇ; ಹಾಗಿದ್ದಲ್ಲಿ ಸಂಪೂರ್ಣ ವಿವರ ನೀಡುವುದು ) | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ರೈಲುಗಳಿಗೆ ಸಿಲುಕಿ ಆಗಿರುವ ಅಪಘಾತಗಳ ವಿವರ ಈ ಕೆಳಕಂಡಂತೆ ಇದೆ. |

| ವರ್ಷ | ಅಪಘಾತಗಳ ಸಂಖ್ಯೆ |
|---|---|
| 2019-20 | 89 |
| 2020-21 | 44 |
| 2021-22 | 37 |
| 2022-23 | 71 |
| 2023-24 | 68 |

| | | |
|---|---|---|
| | | ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಅನುಸಾರ ರೈಲ್ವೆ ಕಾಯ್ದೆ 1989ರ ಸೆಕ್ಷನ್ 124 & 124(ಎ) ರ ಪ್ರಕಾರ ರೈಲ್ವೆ ಅಪಘಾತಗಳಿಂದ ದುರ್ಮರಣ ಸಂಭವಿಸಿದ್ದಲ್ಲಿ ಪರಿಹಾರವನ್ನು ಕೋರಿ ರೈಲ್ವೆ ದಾವೆ ನ್ಯಾಯಾಲಯ (Railway Claims Tribunal) ದಲ್ಲಿ ಯಾರಾದರೂ ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಪಡೆದ ತೀರ್ಪಿನ ಅನುಸಾರ ಪರಿಹಾರ ನೀಡಲಾಗುತ್ತದೆ. |
| (ಈ) | ಮಾನವ ಸಹಿತ ಲೆವೆಲ್ ಕ್ರಾಸಿಂಗ್ ನಲ್ಲಿ ಸಂಭವಿಸುವ ಅವಘಡಗಳಲ್ಲಿ ಪ್ರಾಣ ಕಳೆದುಕೊಂಡವರಿಗೆ ಗಾಯಗೊಂಡವರಿಗೆ ನೀಡಲಾಗುವ ಪರಿಹಾರದ ಮೊತ್ತ ಎಷ್ಟು? (ಆದೇಶ ಪ್ರತಿ ನೀಡುವುದು) | ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಅನುಸಾರ ರೈಲ್ವೆ ಕಾಯ್ದೆ 1989ರ ಸೆಕ್ಷನ್ 124 & 124(ಎ) ರನ್ವಯ ರೈಲುಗಳಿಗೆ ಸಿಲುಕಿ ಆಗಿರುವ ಅಪಘಾತಗಳಿಗೆ ಕಳೆದ ಐದು ವರ್ಷಗಳಲ್ಲಿ ಈ ಕೆಳಕಂಡಂತೆ ಪರಿಹಾರವನ್ನು ಪಾವತಿಸಲಾಗಿದೆ.<br>(ರೂ. ಲಕ್ಷಗಳಲ್ಲಿ)<br>**ವರ್ಷ** / **ಪರಿಹಾರ ಮೊತ್ತ**<br>2019-20 / 604.99<br>2020-21 / 275.30<br>2021-22 / 274.97<br>2022-23 / 626.41<br>2023-24 / 562.48 |

ಸಂಖ್ಯೆ: ಮೂಅಇ 29 ರಾರಾಹೆ 2024/ಇ

**(ಎಂ.ಬಿ.ಪಾಟೀಲ)**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಧು ಜಿ ಮಾದೇಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 04ಕ್ಕೆ : ಅನುಬಂಧ-01

1) ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಭಾರತ ಸರ್ಕಾರವು ದಿನಾಂಕ:21.10.2020 ರಂದು ರೈಲ್ವೆ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಮೂಲಕ ರೂ.15,767 ಕೋಟಿಗಳ ಅಂದಾಜು ವೆಚ್ಚದಲ್ಲಿ ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ರೋಲಿಂಗ್ ಸ್ಟಾಕ್ ಅನ್ನು ಪಡೆಯುವ ವ್ಯವಸ್ಥೆಯೊಂದಿಗೆ ಮಂಜೂರು ಮಾಡಿರುತ್ತದೆ.

ಬೆಂಗಳೂರು ಉಪನಗರ ರೈಲು ಯೋಜನೆಯು 58 ನಿಲ್ದಾಣಗಳೊಂದಿಗೆ ಒಟ್ಟು 148.17 ಕಿ.ಮೀ ಮಾರ್ಗದ ಉದ್ದದ 4 ಕಾರಿಡಾರ್‌ಗಳನ್ನು ಹೊಂದಿದೆ.

| ಕಾರಿಡಾರ್ ಗಳು | ವಿಭಾಗ | ಉದ್ದ (ಕಿ.ಮೀ.) |
|---|---|---|
| 1 | ಬೆಂಗಳೂರು - ದೇವನಹಳ್ಳಿ + ವಿಮಾನ ನಿಲ್ದಾಣ ಸಂಪರ್ಕ | 41.40 |
| 2 | ಬೈಯಪ್ಪನಹಳ್ಳಿ - ಚಿಕ್ಕಬಾಣಾವರ | 25.01 |
| 3 | ಕೆಂಗೇರಿ - ವೈಟ್ ಫೀಲ್ಡ್ | 35.52 |
| 4 | ಹೀಲಲಿಗೆ - ರಾಜಾನುಕುಂಟೆ | 46.24 |
| ಒಟ್ಟು | | 148.17 |

ಮಾನ್ಯ ಪ್ರಧಾನಮಂತ್ರಿಯವರು ಈ ಯೋಜನೆಗೆ ದಿನಾಂಕ:20.06.2022 ರಂದು ಶಂಕುಸ್ಥಾಪನೆಯನ್ನು ನೆರವೇರಿಸಿರುತ್ತಾರೆ.

### ಬೆಂಗಳೂರು ಉಪನಗರ ರೈಲು ಯೋಜನೆಯ ಪ್ರಗತಿ:

(ಎ) ಈವರೆಗೆ ಕರ್ನಾಟಕ ಸರ್ಕಾರದಿಂದ ರೂ.665.42 ಕೋಟಿಗಳು ಹಾಗೂ ರೈಲ್ವೆ ಇಲಾಖೆಯಿಂದ ರೂ.500.00 ಕೋಟಿಗಳು, ಒಟ್ಟಾರೆಯಾಗಿ ರೂ.1165.42 ಕೋಟಿಗಳ ಅನುದಾನವನ್ನು ಈ ಯೋಜನೆಗಾಗಿ ಒದಗಿಸಲಾಗಿದೆ. ಈವರೆಗೆ ರೂ.655.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

(ಬಿ) ಚಿಕ್ಕಬಾಣಾವರ-ಯಶವಂತಪುರ-ಬೈಯಪ್ಪನಹಳ್ಳಿ (25 ಕಿ.ಮೀ) ವ್ಯಾಪ್ತಿಯ ಕಾರಿಡಾರ್-2 ರ ಸಿವಿಲ್ ಕಾಮಗಾರಿಗೆ ದಿನಾಂಕ: 26.08.2022 ರಂದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯು ಆರಂಭಗೊಂಡಿರುತ್ತದೆ.

(ಸಿ) ರಾಜನಕುಂಟೆ-ಯಲಹಂಕ-ಬೈಯಪ್ಪನಹಳ್ಳಿ-ಹೀಲಲಿಗೆ (46.24 ಕಿ.ಮೀ) ವ್ಯಾಪ್ತಿಯ ಕಾರಿಡಾರ್-4 ರ ಸಿವಿಲ್ ಕಾಮಗಾರಿಗೆ ದಿನಾಂಕ: 30.12.2023 ರಂದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯ ಪ್ರಾಥಮಿಕ ಕಾರ್ಯಗಳನ್ನು ಆರಂಭಿಸಲಾಗಿದೆ.

(ಡಿ) ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ರೋಲಿಂಗ್ ಸ್ಟಾಕ್ (ಕೋಚ್‌ಗಳು) ಅನ್ನು ಪಡೆಯುವ ಸಲುವಾಗಿ ಟೆಂಡರ್ ಕರೆಯಲಾಗಿದ್ದು, 3 ಸಂಸ್ಥೆಗಳು ಅರ್ಹತೆ ಹೊಂದಿದ್ದು, ದಿನಾಂಕ: 28.02.2024 ರಂದು ಹಣಕಾಸು ಟೆಂಡರ್ ಅನ್ನು ತೆರೆಯಲಾಗುವುದು.

(ಇ) ದಿನಾಂಕ:15-12-2023ರಂದು ಜರ್ಮನಿಯ KfW ಡೆವಲಪ್‌ಮೆಂಟ್ ಬ್ಯಾಂಕ್‌ನೊಂದಿಗೆ ಯುರೋ 500 ಮಿಲಿಯನ್ (ಅಂದಾಜು ರೂ. 4500 ಕೋಟಿಗಳು) ಸಾಲದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಮತ್ತು ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ (EIB) ನೊಂದಿಗೆ ಯೂರೋ 300 ಮಿಲಿಯನ್ (ಅಂದಾಜು ರೂ. 3000 ಕೋಟಿ) ಸಾಲ ಒಪ್ಪಂದಕ್ಕೆ ಮಾರ್ಚ್-24ರಲ್ಲಿ ಸಹಿ ಹಾಕಲು ಯೋಜಿಸಲಾಗಿದೆ.

(ಎಫ್) ಈ ಯೋಜನೆಯನ್ನು ಡಿಸೆಂಬರ್-2027 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಅದಕ್ಕೆ ಪೂರಕವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**2) ರೈಲು ದ್ವಿಪಥೀಕರಣ ಯೋಜನೆಗಳು:**

(ಎ) ಕರ್ನಾಟಕ ಸರ್ಕಾರ ಹಾಗೂ ರೈಲ್ವೆ ಇಲಾಖೆಗಳು 50:50 ರ ಅನುಪಾತದಲ್ಲಿ ವೆಚ್ಚ ಹಂಚಿಕೆ ಮಾಡಿಕೊಂಡು ಬೈಯಪ್ಪನಹಳ್ಳಿ – ಹೊಸೂರು ಹಾಗೂ ಯಶವಂತಪುರ- ಚನ್ನಸಂದ್ರ ರೈಲ್ವೆ ದ್ವಿಪಥೀಕರಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೆ-ರೈಡ್ ಮೂಲಕ ನಿರ್ಮಿಸಲು ಜೂನ್ 2020 ರಲ್ಲಿ ಅನುಮೋದನೆಯನ್ನು ನೀಡಲಾಗಿದೆ.

(ಬಿ) ಈ ಯೋಜನೆಗಳ ಕಿರು ಮಾಹಿತಿ ಈ ಕೆಳಗಿನಂತಿದೆ:-

| ಕ್ರ.ಸಂ | ದ್ವಿಪಥೀಕರಣ ಯೋಜನೆಗಳು | ಕಿ.ಮೀ. | ಒಟ್ಟು ವೆಚ್ಚ (ಕೋಟಿಗಳಲ್ಲಿ) | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ |
|---|---|---|---|---|---|
| 1 | ಬೈಯಪ್ಪನಹಳ್ಳಿ - ಹೊಸೂರು | 48.00 | 498.73 | 55% | 239.72 |
| 2 | ಯಶವಂತಪುರ- ಚನ್ನಸಂದ್ರ | 21.70 | 314.10 | 25% | 50.46 |

ಸಿ) ಈವರೆಗೆ ಬಿಡುಗಡೆ ಮಾಡಿರುವ ಅನುದಾನ ರೂ.435.02 ಕೋಟಿ (ಕರ್ನಾಟಕ ಸರ್ಕಾರದಿಂದ ರೂ. 100.00 ಕೋಟಿಗಳು ಮತ್ತು ರೈಲ್ವೆ ಮಂತ್ರಾಲಯದಿಂದ ರೂ.335.02 ಕೋಟಿಗಳು)

ಡಿ) ಭೂಸ್ವಾಧೀನ ಪ್ರಕ್ರಿಯೆ: ಪೂರ್ಣಗೊಂಡಿದೆ.

ಇ) ದ್ವಿಪಥೀಕರಣ ಯೋಜನೆಗಳ ಇಲ್ಲಿಯವರೆಗಿನ ಪ್ರಗತಿ:

| ಕ್ರ. ಸಂ | ಯೋಜನೆಯ ವಿವರಣೆ | ಪ್ರಸ್ತುತ ಸ್ಥಿತಿ | ಯೋಜನೆಯ ಟೈಮ್ ಲೈನ್ |
|---|---|---|---|
| 1 | ಯಶವಂತಪುರ -ಚನ್ನಸಂದ್ರ ನಡುವಿನ ಹಳಿ ದ್ವಿಗುಣಗೊಳಿ ಸುವಿಕೆ (21.70 ಕಿ.ಮೀ.) PH 15 (DL) | 1. ಎಲ್ಲಾ ಯಾರ್ಡ್ ಗಳ ಯೋಜನೆಗಳನ್ನು ನೈರುತ್ಯ ರೈಲ್ವೆಯು ಅನುಮೋದಿಸಿದೆ.<br>2. ಅರ್ಥ್ ವರ್ಕ್, ಸಣ್ಣ ಸೇತುವೆಗಳು, ಟ್ರ್ಯಾಕ್ ವರ್ಕ್ಸ್, ಸ್ಟೇಷನ್ ಬಿಲ್ಡಿಂಗ್, ಒಹೆಚ್ಇ, ಎಲೆಕ್ಟ್ರಿಕಲ್ ಯುಟಿಲಿಟಿ ಶಿಫ್ಟಿಂಗ್ ಕೆಲಸಗಳು, ಎಸ್ &ಟಿ ಕೆಲಸಗಳಿಗೆಟೆಂಡರ್ ನೀಡಲಾಗಿದೆ. ಸದರಿ ಕಾಮಗಾರಿಯ ಪ್ರಗತಿಯು ಉತ್ತಮವಾಗಿದ್ದು ಡಿಸೆಂಬರ್ 2024 ರೊಳಗೆ ಪೂರ್ಣಗೊಳ್ಳಲಿದೆ. | 2024-25<br>i. ಯಶವಂತಪುರ-ಯಶವಂತಪುರ ಬೈಪಾಸ್-ಲೊಟ್ಟೆಗೊಲ್ಲಹಳ್ಳಿ-ಹೆಬ್ಬಾಳ (8.1 ಕಿ.ಮೀ)-ಜೂನ್-2024<br>ii. ಯಶವಂತಪುರ ಬೈ-ಪಾಸ್ ನಿಂದ ಲೊಟ್ಟೆ ಗೊಲ್ಲಹಳ್ಳಿ ನಡುವಿನ 4 ನೇ ಮಾರ್ಗ (2.5 ಕಿ.ಮೀ)- ಡಿಸೆಂಬರ್'-2024<br>iii. ಹೆಬ್ಬಾಳ - ಬೈಯಪ್ಪನಹಳ್ಳಿ (11.6 ಕಿ.ಮೀ) - ಡಿಸೆಂಬರ್'2024 |
| 2 | ಬೈಯಪ್ಪನಹಳ್ಳಿ-ಹೊಸೂರು ನಡುವಿನ ಹಳಿ ದ್ವಿಗುಣಗೊಳಿ ಸುವಿಕೆ (48 ಕಿ.ಮೀ.) PH15 (DL) | 1. ಕಾರ್ಮೆಲಾರಾಮ್ - ಹೀಲಲಿಗೆ (10.5 ಕಿ.ಮೀ) 2023 ರ ಫೆಬ್ರುವರಿ-20 ರಂದು ಕಾರ್ಯಾರಂಭಿಸಿತು.<br>2. ಮಣ್ಣಿನ ಕೆಲಸ, ಸಣ್ಣ ಸೇತುವೆಗಳು, ಬ್ಯಾಲಸ್ಟ್, ಟ್ರ್ಯಾಕ್ ಲಿಂಕ್, ಒಹೆಚ್ಇ (ಆನೇಕಲ್-ಬೆಳ್ಳಂದೂರು ರಸ್ತೆ ನಡುವೆ), ಯುಟಿಲಿಟಿ ಶಿಫ್ಟಿಂಗ್, ಬೈಯಪ್ಪನಹಳ್ಳಿ-ಬೆಳ್ಳಂದೂರು ರಸ್ತೆ ನಡುವಿನ ಪ್ರಮುಖ ಸೇತುವೆಗಳು, ಬೆಳ್ಳಂದೂರು ಮತ್ತು ಹುಸ್ಕೂರು ಯಾರ್ಡ್ ಗಳಲ್ಲಿ ಬ್ಲಾಂಕಿಂಗ್ ಮತ್ತು ಸಣ್ಣ ಸೇತುವೆಗಳು ಇತ್ಯಾದಿಗಳಿಗೆ ಕೆಲಸಗಳಿಗೆ ಟೆಂಡರ್ ನೀಡಲಾಗಿದೆ. ಸದರಿ ಕಾಮಗಾರಿಯ ಪ್ರಗತಿಯು ಉತ್ತಮವಾಗಿದ್ದು ಡಿಸೆಂಬರ್ 2024ರೊಳಗೆ ಪೂರ್ಣಗೊಳ್ಳಲಿದೆ. | 2023-24<br>(I) ಬೆಳ್ಳಂದೂರು - ಕಾರ್ಮೆಲಾರಾಮ್, (3.5 ಕಿ.ಮೀ) ಮತ್ತು<br>(II) ಬೆಳ್ಳಂದೂರು ರೋಡ್ ಮತ್ತು ಹುಸ್ಕೂರು ಹೊಸ ಯಾರ್ಡ್ ಮತ್ತು ಮಾರನಾಯಕನಹಳ್ಳಿಗೆ ಆನೇಕಲ್ ರಸ್ತೆ (6.9 ಕಿ.ಮೀ) : ಮಾರ್ಚ್-2024<br><br>2024-25<br>i. ಮಾರನಾಯಕನಹಳ್ಳಿ ಯಿಂದ ಹೊಸೂರು (7.8 ಕಿ.ಮೀ) – ಜೂನ್-2024,<br>ii. ಬೈಯಪ್ಪನಹಳ್ಳಿ-ಬೆಳ್ಳಂದೂರು (9 ಕಿ.ಮೀ) ರಸ್ತೆ- ಸೆಪ್ಟೆಂಬರ್-2024.<br>iii. ಹೀಲಲಿಗೆ - ಆನೇಕಲ್ ರಸ್ತೆ (10.3 ಕಿ.ಮೀ) - ಡಿಸೆಂಬರ್'24 |